## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್ ಸಿ ಕೇಸ್ ನಂ. 258/2023

| | | |
|---|---|---|
| ಸಾಕ್ಷಿದಾರರ ಹೆಸರು | ಚಂದ್ರಮೋಹನ್ | ಪ್ರಾಸಾ – 16 ಚಾಸಾ – 19 |
| ತಂದೆಯ ಹೆಸರು | ಎಂ ರಂಗರಾಮಯ್ಯ | |
| ವಯಸ್ಸು | 50 ವರ್ಷ | ಪ್ರಮಾಣ ವಚನ ಮಾಡಿದ ದಿನಾಂಕ.**30.01.2025** |
| ವೃತ್ತಿ | ಪಿ ಡಬ್ಲೂ ಡಿ, ಸಹಾಯಕ ಅಭಿಯಂತರರು, ಕೆ ಆರ್ ನಗರ | |
| ವಾಸ ಸ್ಥಳ | ಮೈಸೂರು | |

**<u>ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:</u>**

ನಾನು 2018 ರಿಂದ 2023 ರವರೆಗೆ ಲೋಕೋಪಯೋಗಿ ಇಲಾಖೆ, ನಂ.1 ಉಪ ವಿಭಾಗ ಮೈಸೂರು ಕಚೇರಿಯಲ್ಲಿ ನಾನು ಡೆಪ್ಯುಟೇಷನ್ ಆಧಾರದಲ್ಲಿ ಸಹಾಯಕ ಇಂಜಿನಿಯರ್–2 ಎಂದು ಕೆಲಸ ಮಾಡುತ್ತಿದ್ದೆ. ಆ ಕಾಲಕ್ಕೆ ಮೇಟಗಳ್ಳಿ ಪೋಲಿಸ್ ಠಾಣೆಯಿಂದ ನಮ್ಮ ಕಚೇರಿಗೆ ಮೊಕದ್ದಮೆ ಸಂಖ್ಯೆ 56/23 ಪ್ರಕರಣದಲ್ಲಿ ನಕಾಶೆ ತಯಾರಿಸಿಕೊಡುವಂತೆ ಮನವಿ ಬಂದಿತ್ತು. ಆ ಪ್ರಕರಣದ ನಕಾಶೆ ತಯಾರಿಸಲು ನನಗೆ ನೇಮಿಸಿದ್ದರು. ದಿನಾಂಕ 19.06.2023 ರಂದು ನಾನು ಸಿದ್ದಲಿಂಗಪಾಳ್ಯದಲ್ಲಿರುವ ರಾಘವೇಂದ್ರ ಬೇಕರಿಯಲ್ಲಿ ಮದುಕುಮಾರ್ ಹೆಚ್ ಸಿ ಎನ್ನುವ ಮುಖ್ಯ ಪೇದೆ 486 ರವರು ತೋರಿಸಿ ವಿವರಿಸಿರುವ ಸ್ಥಳದಲ್ಲಿ ನಕಾಶೆ ತಯಾರಿಸಿ ಕೊಟ್ಟಿದ್ದೆ, ಅದನ್ನು ನಮ್ಮ ಕಚೇರಿಯಿಂದ ಪೋಲಿಸ್ ಠಾಣೆಗೆ ಕಳುಹಿಸಿದ್ದರು. ಈಗ ನಾನು ನೋ ೀಡುತ್ತಿರುವ ನಕಾಶೆ

ಅದೇ ಇದ್ದು, ಸದರಿ ನಕಾಶೆಯನ್ನು ಅದನ್ನು ನಿಶಾನೆ ಪಿ–26 ಎಂದು, ಸಾಕ್ಷಿದಾರರ ಸಹಿಯನ್ನು ನಿಶಾನೆ ಪಿ–26(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ಆರೋಪಿತರ ಪರ ಶ್ರಿ ಜಿ.ಪಿ.ಎಸ್ ವಕೀಲರಿಂದ :**

ಮೇಟಗಳ್ಳಿ ಪೋಲಿಸ್ ಠಾಣೆಯಿಂದ ಬಂದ ಪತ್ರ ನಮ್ಮ ಕಚೇರಿಯಲ್ಲಿ ಇದೆ. ಹೆಚ್ ಸಿ ಮದುಕುಮಾರ್ ರವರು ಹೇಳಿದಂತೆ ನಾನು ನಕಾಶೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಬೇಕರಿಗೆ ಸಂಬಂಧಪಟ್ಟವರು ಯಾರೋ ಇದ್ದರು ಅವರು ಯಾರ ಎಂದು ನನಗೆ ಗೊತ್ತಿಲ್ಲ. ನಾನು ಆ ಸ್ಥಳದ ಪೋಟೋವನ್ನು ನಕಾಶೆ ಜೊತೆ ಸಲ್ಲಿಸಿಲ್ಲ. ಸ್ಥಳದ ಪೋಟೋವನ್ನು ತೆಗೆಯಲು ತೊಂದರೆ ಇರಲಿಲ್ಲ. ನಾನು ಆ ಕಟ್ಟಣದ ಮಾಲೀಕರ ಬಗ್ಗೆ ಮತ್ತು ಆ ಕಟ್ಟಣ ಯಾವಾಗ ನಿರ್ಮಾಣಗೊಂಡಿತ್ತು ಎನ್ನುವ ಬಗ್ಗೆ ವಿವರಗಳನ್ನು ಪಡೆದಿಲ್ಲ. ಆ ಕಟ್ಟಡದಲ್ಲಿ 5 ಅಂಗಡಿಗಳಿವೆ. ಆ ಕಟ್ಟಡದಲ್ಲಿ ಎಷ್ಟು ಮಹಡಿಗಳಿವೆ ಎಂದು ನನಗೆ ನೆನಪಿಲ್ಲ. ಆ ದಿನ ನಾನು ಆ ಕಟ್ಟಡವನ್ನು ನೋಡಿದ್ದೆ. ಆದರೆ ಎಷ್ಟು ಮಹಡಿಗಳಿವೆ ಎಂದು ನೆನಪಿಲ್ಲ. ನಕಾಶೆ ತಯಾರಿಸುವ ಕಾಲಕ್ಕೆ ನಾನು ಅಕ್ಕಪಕ್ಕದ ಅಂಗಡಿಗಳಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದು ನಾನು ವಿಚಾರಿಸಿಲ್ಲ ಮತ್ತು ಆ ಬಗ್ಗೆ ನಕಾಶೆಯಲ್ಲಿ ನಮೂದಿಸಿಲ್ಲ. ಆ ಕಟ್ಟಡದಲ್ಲಿ ಅಂಗಡಿಗಳ ಸಂಖ್ಯೆ ನಮೂದಿಲ್ಲ. ನಕಾಶೆಯಲ್ಲಿ ಅಂಗಡಿ ಸಂಖ್ಯೆಗಳನ್ನು ನನ್ನ ಅನುಕೂಲಕ್ಕೆ ತಕ್ಕಂತೆ ನಮೂದಿಸಿದ್ದೇನೆ ಎಂದರೆ ನಿಜ. ಆ ಕಟ್ಟಡದ ನಿರ್ಮಾಣ ಹಂತದಲ್ಲಿ ತಯಾರಿಸಿದ್ದ ನಕಾಶೆಯನ್ನು ನಾನು ನೋಡಿಲ್ಲ. ನಾನು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸ ಅನುಕೂಲಕ್ಕೆ ತಕ್ಕಂತೆ ನಾನು

ಕಚೇರಿಯಲ್ಲಿಯೇ ನಕಾಶೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸ ಇ ಎ ಒ

4 ನೇ ಅಪರ  ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮೈಸೂರು.